# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮುಳಬಾಗಿಲು.

**ಸಿ. ಸಿ. ಸಂಖ್ಯೆಃ 228/2018**

ದಿನಾಂಕಃ 19.06.2026

| | | | |
|---|---|---|---|
| ಹೆಸರುಃ | ಗೋವಿಂದ್ ಬಿ.ಟಿ. | ಸಿ.ಡಬ್ಲ್ಯೂಃ 01 | |
| ತಂದೆಯ ಹೆಸರು | ತಿರುಮಲೇ ಗೌಡ | ಪಿ. ಡಬ್ಲ್ಯೂಃ 05 | |
| ವಯಸ್ಸು | 43 ವರ್ಷ | | |
| ಕೆಲಸ | ಪಿ ಐ., ಹೊಸಕೋಟೆ ಪೋಲಿಸ್ ಠಾಣೆ | | ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ | ಹೊಸಕೋಟೆ | | |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದಃ**

ನಾನು 03.10.2016 ರಿಂದ 12.01.2019 ರವರೆಗೆ ಪಿ ಎಸ್ ಐ ಆಗಿ ಮುಳಬಾಗಿಲು ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 17.03.2017 ರಂದು ಬೆಳಿಗ್ಗೆ 11.00 ಗಂಟೆಯಲ್ಲಿ ನಾನು ಠಾಣೆಯಲ್ಲಿದ್ದಾಗ ನನಗೆ ಬಂದ ಖಚಿತ ಮಾಹಿತಿ ಏನೆಂದರೆ ಮುಳಬಾಗಿಲು ಠಾಣಾ ಸರಹದ್ದು ತಾಯಲೂರು ಹೋಬಳಿ ಬಿ. ಹೊಸಹಳ್ಳಿ ಗ್ರಾಮದ ಮುನಿರತ್ನ ರವರ ತೋಟದಲ್ಲಿರುವ ಶೆಡ್ ನಲ್ಲಿ ಅಕ್ರಮವಾಗಿ ಮದ್ಯ ತಯಾರಿಕೆ ಮತ್ತು ಸಾಗಾಣಿಕೆ ಮಾಡುತ್ತಿದ್ದಾರೆ ಎಂದು ಬಂದ ಖಚಿತ ಮಾಹಿತಿ ಮೇರೆಗೆ ನಾನು ನಮ್ಮ ಡಿವೈಎಸ್ಪಿ ಹಾಗೂ ಸಿಪಿಐ ರವರಿಗೆ ಮಾಹಿತಿ ತಿಳಿಸಿ ಚಾಸಾ-6 ರಿಂದ 16 ರವರೆಗಿನ ಅಧಿಕಾರಿ ಹಾಗೂ ಸಿಬ್ಬಂದಿ ರವರಿಗೊಂದಿಗೆ ಹಾಗೂ ಅದೇ ರೀತಿ ಅಬಕಾರಿ ಇಲಾಖೆಯವರಾದ ಚಾಸಾ-9 ಮತ್ತು 10 ರವರೊಂದಿಗೆ ನಮ್ಮ ಇಲಾಖಾ ಜೀಪ್ ನಲ್ಲಿ ಸಂಖ್ಯೆ ಕೆಎ-07-ಜಿ-309 ನೇದ್ದರಲ್ಲಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ವಾಹನಗಳಲ್ಲಿ ಬಿ.ಹೊಸಹಳ್ಳಿ ಗ್ರಾಮಕ್ಕೆ ತೆರಳಿ ಅಲ್ಲಿ ಚಾಸಾ-2 ರಿಂದ 5 ರವರ ಪಂಚರಿಗೆ ಸದರಿ ದಾಳಿ ಬಗ್ಗೆ ತಿಳಿಸಿ, ಮದ್ಯಾಹ್ನ 12.00 ಗಂಟೆ ಸಮಯದಲ್ಲಿ ಮುನಿರತ್ನ ರವರ ತೋಟದ ಶೆಡ್ ಗೆ ದಾಳಿ ಮಾಡಿದಾಗ, ಸದರಿ ಸ್ಥಳದಲ್ಲಿ 1 ರಿಂದ 6 ನೇ ಆರೋಪಿತರು ಪರಾರಿ ಆಗಲು ಯತ್ನಿಸಿದ್ದು, ನಮ್ಮ ಸಿಬ್ಬಂದಿಗಳ ಸಹಾಯದಿಂದ ಅವರನ್ನು ವಶಕ್ಕೆ ಪಡೆದು, ಸ್ಥಳವನ್ನು ಪಡಿರಿಶೀಲಿಸಲಾಗಿ ಮದ್ಯ ತಯಾರಿಸಿರುವುದು ಕಂಡು ಬಂದಿರುತ್ತದೆ. ಸದರಿ ಮದ್ಯ ತಯಾರಿಕೆಗೆ

ಆಸಾಮಿಗಳಿಗೆ ಯಾವುದಾದರೂ ಲೈಸೆನ್ಸ್ ಇದೆ ಎಂದು ಕೇಳಲಾಗಿ ಅವರು ಇಲ್ಲವೆಂದು ಒಪ್ಪಿಕೊಂಡಿರುತ್ತಾರೆ.

ಸ್ಥಳದಲ್ಲಿ 48 ಗ್ರೀನ್ ಮ್ಯಾಜಿಕ್ ಮದ್ಯದ ಬಾಟಲಿಗಳನ್ನು ಅಮಾನತ್ತು ಪಡಿಸಿಕೊಂಡು ಅದರಲ್ಲಿ 10 ಬಾಟಲ್ ಗಳನ್ನು ಮಾದರಿಗಾಗಿ ಎಸ್ ಎಫ್ ಎಲ್ ತಜ್ಞರಿಗೆ ಕಳುಹಿಸಲು ಸಂಗ್ರಹಿಸಿರುತ್ತೇವೆ. 1320 ಗೊಲ್ಕಂಡ ಮದ್ಯದ ಬಾಟಲಿಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಅದರಲ್ಲಿ 10 ಬಾಟಲ್ ಗಳನ್ನು ಮಾದರಿಗಾಗಿ ಎಸ್ ಎಫ್ ಎಲ್ ತಜ್ಞರಿಗೆ ಕಳುಹಿಸಲು ಸಂಗ್ರಹಿಸಿರುತ್ತೇವೆ. ಅದೇ ರೀತಿ 4,000 ಖಾಲಿ ಬಾಟಲಿಗಳನ್ನು ಅಮಾನತು ಪಡಿಸಿಕೊಂಡಿರುತ್ತೇನೆ. 33 ಲೀಟರ್ ಸಾಮರ್ಥ್ಯದ 36 ಸ್ಪಿರೀಟ್ ಕ್ಯಾನ್ ಗಳನ್ನು ಅಮಾನತ್ತು ಪಡಿಸಿಕೊಂಡು, ಪ್ರತಿಯೊಂದು ಕ್ಯಾನ್ ನಿಂದ 750 ಎಂ ಎಲ್ ನಷ್ಟು ಸ್ಪಿರಿಟ್ ನ್ನು ಮಾದರಿಗಾಗಿ ಎಸ್ ಎಫ್ ಎಲ್ ತಜ್ಞರಿಗೆ ಕಳುಹಿಸಲು ಸಂಗ್ರಹಿಸಿರುತ್ತೇವೆ. 40 ನೀರಿನ ಕ್ಯಾನ್ ಗಳು ಇದ್ದು, 20 ಲೀಟರ್ ನಷ್ಟು ಸಾಮರ್ಥ್ಯ ಇರುತ್ತದೆ. ಸದರಿ ಮಾಲುಗಳನ್ನು "ಎಂ" ಎಂಬ ಸೀಲ್ ನಿಂದ ಸೀಲ್ ಮಾಡಲಾಗಿರುತ್ತದೆ. ಅದೇ ರೀತಿ 5 ಲೀಟರ್ ಕ್ಯಾನ್ ನಲ್ಲಿ ಕ್ಯಾರೇಮಲ್ ಎಂಬ ದ್ರವ್ಯ ಇದ್ದು, ಸದರಿ ದ್ರವ್ಯವೂ ಮದ್ಯ ತಯಾರಿಕೆಯಲ್ಲಿ ಮದ್ಯಕ್ಕೆ ಬಣ್ಣ ಬರಲು ಉಪಯೋಗಿಸುತ್ತಾರೆ ಎಂದು ಅಬಕಾರಿ ಅಧಿಕಾರಿಗಳು ಅಭಿಪ್ರಾಯ ಪಟ್ಟಿರುತ್ತಾರೆ. ಅದೇ ರೀತಿ 750 ಎಂ ಎಲ್ ಮತ್ತೊಂದು ದ್ರವ್ಯ ಇದ್ದು, ಇದು ಮದ್ಯ ರುಚಿ ಬರಲು ಮದ್ಯ ತಯಾರಿಕೆಯಲ್ಲಿ  ಉಪಯೋಗಿಸುತ್ತಾರೆ ಎಂದು ಅಬಕಾರಿ ಅಧಿಕಾರಿಗಳು ಅಭಿಪ್ರಾಯ ಪಟ್ಟಿರುತ್ತಾರೆ. ಸದರಿ ಮಾಲುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸದರಿ ಮದ್ಯದ ಬಾಟಲುಗಳ ಮೇಲೆ ಲೇಬಲ್ ಗಳನ್ನು ಅಂಟಿಸಿ ಅದು ರಕ್ಷಣಾ ಸೇವಾ ಇಲಾಖೆಗೆ ಸಂಬಂದಿಸಿದಾಗಿ ಸೃಷ್ಟನೆ ಮಾಡಿ ಸರ್ಕಾರಕ್ಕೆ  ಮೋಸ ಮಾಡುವ ಉದ್ದೇಶದಿಂದ ಹಾಗೂ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟುವ ಮಾಡುವ ಉದ್ದೇಶದಿಂದ ಲೇಬಲ್ ನ್ನು ಸೃಷ್ಟನೇ ಮಾಡಿರುವುದು ಕಂಡು ಬಂದಿರುತ್ತದೆ. ಸ್ಥಳದಲ್ಲಿದ್ದ ಮುಚ್ಚಳ ಹಾಕುವ ಯಂತ್ರವನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ.

ನಂತರ ಅದೇ ದಿನ ಮದ್ಯಾಹ್ನ 12 ರಿಂದ 3 ಗಂಟೆ ಸಮಯದಲ್ಲಿ ಮಹಜರು ಕ್ರಮವನ್ನು ಜರುಗಿಸಿರುತ್ತೇನೆ. ನಂತರ ಮಾಲು ಮತ್ತು ಆರೋಪಿತರೊಂದಿಗೆ ಠಾಣೆಗೆ ವಾಪಸ್ಸು ಆಗಿರುತ್ತೇನೆ. ನಂತರ ವರದಿಯನ್ನು ತಯಾರಿಸಿ ಸಂಜೆ 4.30 ಗಂಟೆಗೆ ಸ್ವಯಂಪ್ರೇರಿತವಾಗಿ ಮೊಕದ್ದಮೆ ಸಂಖ್ಯೆ 40/17 ರಂತೆ ಪ್ರಕರಣವನ್ನು ತಯಾರಿಸಿಕೊಂಡು, ಪ್ರ.ವ.ವರದಿಯನ್ನು ಮೇಲಾಧಿಕಾರಿಗಳಿಗೆ ಹಾಗೂ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ನಂತರ ಸದರಿ ಮುದ್ದೆಮಾಲುಗಳನ್ನು ಪಿಎಫ್ ಸಂಖ್ಯೆ 32/17 ರಂತೆ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಸಂಜೆ 5–5.45 ಗಂಟೆಯವರೆಗೆ ಚಾಸಾ–17 ರಿಂದ 19 ರವರ ಸಮಕ್ಷಮ 1 ರಿಂದ 6 ನೇ ಆರೋಪಿತರಿಗೆ ಸಂಬಂದಿಸಿದ ಮೊಬೈಲ್ ಗಳನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡು, ಅವುಗಳನ್ನು ಪಿ.ಎಫ್ ಸಂಖ್ಯೆ 33/17 ರಂತೆ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. 1 ರಿಂದ 6 ನೇ ಆರೋಪಿತರ ಸ್ವ–ಇಚ್ಚಾ ಹೇಳಿಕೆಗಳನ್ನು ಪಡೆದುಕೊಂಡು ಅವರ ವಿರುದ್ದ ದಸ್ತಗಿರಿ ಕ್ರಮ ಜರುಗಿಸಿ, ಆವೇಳೆಯಾಗಿದ್ದರಿಂದ ಸಿಬ್ಬಂದಿರವರ ಬೆಂಗಾವಲಿನಲ್ಲಿ ಆರೋಪಿತರನ್ನು ಲಾಕ್‌ಪ್ ನಲ್ಲಿ ಇರಿಸಿ ಮರುದಿನ ಮಾನ್ಯ ನ್ಯಾಯಾಲಯಕ್ಕೆ ರಿಮ್ಯಾಂಡ್ ಅರ್ಜಿಯೊಂದಿಗೆ ಹಾಜರು ಪಡಿಸಿರುತ್ತೇನೆ.

ದಿ. 28.03.2017 ರಂದು 8 ನೇ ಆರೋಪಿಯನ್ನು ಬೆಳಿಗ್ಗೆ 8.30 ಗಂಟೆಯಲ್ಲಿ ಬೆಳ್ತೂರು ಬಸ್ ನಿಲ್ದಾಣದಿಂದ ವಶಕ್ಕೆ ಪಡೆದು, ಠಾಣೆಗೆ ಬಂದು ಆತನ ಸ್ವ–ಇಚ್ಚಾ ಹೇಳಿಕೆಯನ್ನು ಪಡೆದುಕೊಂಡು ಆತನ ವಿರುದ್ದ ದಸ್ತಗಿರಿ ಕ್ರಮ ಜರುಗಿಸಿ ಮಾನ್ಯ ನ್ಯಾಯಾಲಯಕ್ಕೆ ರಿಮ್ಯಾಂಡ್ ಅರ್ಜಿಯೊಂದಿಗೆ ಹಾಜರು ಪಡಿಸಿರುತ್ತೇನೆ.

ನಂತರ ಮುಂದಿನ ತನಿಖೆಗಾಗಿ ಚಾಸಾ–20 ರವರಿಗೆ ಕಡತವನ್ನು ಹಸ್ತಾಂತರ ಮಾಡಿರುತ್ತೇನೆ.

***ಮುಂದುವರೆದ ಮುಖ್ಯವಿಚಾರಣೆಯನ್ನು ಮಾನ್ಯ ಎಪಿಪಿ ರವರ ಕೋರಿಕೆಗೆ ಮೇರೆಗೆ ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಗೌಡ ಜಗದೀಶ ರುದ್ರೇ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಮುಳಬಾಗಿಲು.